ಶುರುವಾಗುವ ಸಮಯ ಅದಾಗಲೇ ಮೀರಿ ಹೋಗಿತ್ತು. ಆದರೆ ಆ ಕಾರ್ಯಕ್ರಮದ ಕೇಂದ್ರಬಿಂದುವಾಗಿದ್ದ ಪಂಚಯ್ಯಸ್ವಾಮಿಗಳು ಮಾತ್ರ ಇನ್ನೂ ವಿಶ್ರಾಂತಿ ಕೋಣೆಯಲ್ಲಿ ಚಿಂತಾಕ್ರಾಂತರಾಗಿ ತೂಗುಮಂಚದ ಮೇಲೆ ಕುಂತಿದ್ದರು. ಅವರಿಗೆ ಈ ಕ್ಷಣದಲ್ಲಿ ಏನೇನೂ ಬೇಡವಾಗಿತ್ತು. ಆ ವೇಳೆಯಲ್ಲಿ ಅವರ ಮನಸ್ಸು ಅಲೌಕಿಕ ಬದುಕಿನ ಚೌಕಟ್ಟಿನಿಂದ ಹೊರ ಬಂದು ಲೌಕಿಕ ಬದುಕಿನ ಕುರಿತು ಯೋಚಿಸುತ್ತಿತ್ತು. ಲೋಕ ನಿಂದನೆಯನ್ನು ಮೀರಿ ಅನೈತಿಕ ಸಂಬಂಧಕ್ಕೆ ನೈತಿಕತೆಯ ಬಂಧ ತೊಡಿಸುವ ಬಗ್ಗೆ ಯೋಚಿಸುತ್ತಿತ್ತು. ಈ ಕಾರಣವಾಗಿ ಆಗಲೇ ಅವರು ಒಂದು ನಿರ್ಧಾರಕ್ಕೆ ಬಂದಿದ್ದರು.

## ಮಾಯಿ: ನಾಕು

'ಬಸವ ಪುರಾಣ' ನಡೆಸಿಕೊಡುವ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದ ಉಸ್ತುವಾರಿಯನ್ನು ಹೊತ್ತಿದ್ದ ಮಳಲಿ ಭೀಮಪ್ಪ, ಮುಂದು ಮಾಡಿದ ಬಾಗಿಲನ್ನು ತಳ್ಳಿಕೊಂಡು ವಿಶ್ರಾಂತಿ ಕೋಣೆಯೊಳಗೆ ಬರುತ್ತಲೇ, 'ಅಪ್ಪಗೋಳ ಕಾರ್ಯಕ್ರಮಕ್ಕ ವ್ಯಾಳ್ಯೆ ಆಗೆದ. ಮಂತ್ರಿ ಶರಣಪ್ಪನವ್ರು ಬಂದ ಕುಂತು ಭಾಳೊತ್ತಾತು. ವೇದಿಕೆ ಮುಂದ ಜನ್ರು ಕುಂಡ್ರಲಿಕ್ಕೆ ಜಾಗ ಸಾಲವಲ್ದು! ಅಷ್ಟು ಜನ್ರು ನೆರೆದಾರು. ನೀವು ಬಂದ್ರ ಈಗಿಂದ ಈಗ್ಲೆ ಕಾರ್ಯಕ್ರಮ ಚಾಲೂ ಮಾಡ್ಬೋದು...' ಎಂದು ಪಂಚಯ್ಯಸ್ವಾಮಿಗಳಿಗೆ ಅಂದ. ಕೋಣೆಯೊಳಗೆ ಅತ್ತಿಂದಿತ್ತ ಇತ್ತಿಂದತ್ತ ಹೆಜ್ಜೆ ಹಾಕುತ್ತಿದ್ದ ಅವರು ಮಳಲಿ ಭೀಮಪ್ಪನ ಮಾತುಗಳನ್ನು ಸುಮ್ಮನೇ ಕೇಳಿಸಿಕೊಂಡರು. ಗಳಿಗೊತ್ತು ಒಂದೂ ಮಾತಾಡದೆ ತಮ್ಮೊಳಗೇ ಯೋಚಿಸತೊಡಗಿದರು. ಆಮೇಲೆ ದೀರ್ಘವಾದ ನಿಟ್ಟುಸಿರೊಂದನ್ನು ಬಿಟ್ಟು ಮಳಲಿ ಭೀಮಪ್ಪನತ್ತ ದೃಷ್ಟಿ ನೆಟ್ಟರು. ಆಗ ಆತನಿಗೆ ಭಯವಾದಂತಾಯಿತು. ಮಾಯಾಳನ್ನು ಮುಂದಿಟ್ಟುಕೊಂಡು ಪಂಚಯ್ಯಸ್ವಾಮಿಗಳ ವಿಚಾರದಲ್ಲಿ ತಳವಾರ ಓಣ್ಯಾಗಿನ ಮಂದಿ ಇಲ್ಲಕ್ಕಿಲ್ಲದಂಗೆ ಮಾತಾಡಿಕೊಳ್ಳುತ್ತಿದ್ದ ಸುದ್ದಿಯನ್ನು ಕಲ್ಲಯ್ಯಸ್ವಾಮಿ ಆತನಿಗೆ ನಿನ್ನೆಯೇ ಮುಟ್ಟಿಸಿದ್ದ. ಇದೆಲ್ಲ ಗೊತ್ತಾಗಿದೆಯೇನೋ ಎಂದು ಆತನಿಗೆ ಆತಂಕವಾಯಿತು. ಆತ ಒಂದೂ ಮಾತಾಡದೆ ಸುಮ್ಮನೆ ಉಗುಳು ನುಂಗುತ್ತ ನಿಂತ. ಕ್ಷಣ ಹೊತ್ತು ಕೋಣೆಯ ತುಂಬ ಮೌನ ಆವರಿಸಿತು. ಆಕ್ಷಣದಲ್ಲಿ ಆ ನೀರವ ಮೌನವನ್ನು ಕದಡಲೆಂಬಂತೆ ಪಂಚಯ್ಯಸ್ವಾಮಿಗಳು, 'ಭೀಮಪ್ಪ, ನಾ ಹಿಂಗ ಮಾತಾಡಾಕತ್ತೀನೆಂತ ತಪ್ಪು ತಿಳಿಬ್ಯಾಡ. ನಾನು ತೊಟ್ಟರೊ ಈ ಕಾವಿಬಟ್ಟೆಯೊಳಗಿನ ಬದುಕು ನನ್ಗ ಸಾಕಾಗೆದ. ಈ ಕಾವಿಯೊಳಗ ಇದ್ಕೊಂಡು ದೇಹ ಬಯಕೆಗಳನ್ನು ಹಿಡಿತದೊಳಗ ಇಟ್ಕೋಳಿಕ್ಕೆ ನನ್ಗ ಆಗ್ಲಿಲ್ಲ! ನಾನು ಮೋಹಕ್ಕೆ ಒಳಗಾದೆ! ಅದಕ್ಕs, ಮಾಯಾಳನ್ನು ಕೂಡಿದೆ! ಇನ್ನು, ಕಾಮವನ್ನು ಗೆಲ್ಲಲಿಕ್ಕಾಗದ ನಾನು ಸ್ವಾಮಿ ಆಗಿರೋದು ಚೆಂದ ಕಾಣ್ಸಂಗಿಲ್ಲ. ಜನ್ರು ನನ್ಮ್ಯಾಲೆ ಭಾಳs ನಂಬಿಕೆ ಇಟ್ಟಾರು. ಹಂಗs, ಈ ಮಠದ ಮ್ಯಾಲೇನೂ ಅವ್ರಿಗೆ ಅಟ್ಟ ನಂಬಿಕೆ ಐತಿ. ಆ ನಂಬಿಕೆಗೆ ಚ್ಯುತಿ ತರುವಂಥ ಕೆಲ್ಸ ನನ್ನಿಂದ ಆಗಬಾರದು! ಅದಕ್ಕs, ನಾನು ಈಗಿಂದ ಈಗ್ಲೆ ಈ ಮಠ, ಈ ಮಠದ ಪೀಠ ಎರಡನ್ನೂ ತ್ಯಾಗ ಮಾಡ್ಬೇಕಂತ ನಿರ್ಧಾರ ಮಾಡೀನಿ. ಈ ಕಾವಿ ಬಟ್ಟೆ ಅನ್ನೋದು ಬೆಂಕಿ ಇದ್ದಂಗ! ಈ ಬೆಂಕಿ ಮೈಮೇಲೆ ಹಾಕ್ಕೊಂಡು ಇಂಥ ಕೆಲ್ಸ ಮಾಡ್ಕೊಂತ ಮಠದೊಳಗೆ ಇರೋದು ನನ್ಗ ಬ್ಯಾಡಾಗೆದ. ಹಂಗs, ನಾನು ಮಾಯಾಳನ್ನು ಮದಿವಿಯಾಗಿ ಸಂಸಾರಸ್ಥನಾಗೊ ನಿರ್ಧಾರಕ್ಕ ಬಂದೀನಿ. ಹಂಗಂತ ಇದ್ದಕ್ಕಿದ್ದಂಗನs ನನ್ನ ಮನಸ್ಥಿತಿಯೊಳ್ಗ ಇಂಥ ಬದಲಾವಣೆ ಯಾಕ ಆತು ಅನ್ನೂದು ನನ್ಗೂ ಗೊತ್ತಿಲ್ಲ! ಇನ್ಮ್ಯಾಲೆ ನಾನು ಇಲ್ಲಿ ಭಾಳೊತ್ತಂಕ ಇರಲಾರೆ. ನಾನು ಹೊರಡ್ತೀನಿ...' ಎಂದವರೆ ವಿಶ್ರಾಂತಿ ಕೋಣೆಯಿಂದ ಹೊರಬಂದು ಸುತ್ತಲೂ ಕಣ್ಣಾಡಿಸಿದರು. ಹೊರಗೆ ವೇದಿಕೆಯ ಮುಂದೆ ಜನರ ಗದ್ದಲವಿತ್ತು. ಅವರು ತಮ್ಮ ತಮ್ಮೊಳಗೇ ಏನೇನೊ ಮಾತಾಡಿಕೊಳ್ಳುತ್ತಿದ್ದರು. ಕಾರ್ಯಕ್ರಮ ಶುರುವಾಗುವ ಸಮಯ ಮೀರಿತ್ತಾದ್ದರಿಂದ ಅವರ ಸಹನೆಯ ಕಟ್ಟೆ ಒಡೆದಿತ್ತು. ಪಂಚಯ್ಯಸ್ವಾಮಿಗಳ ಮನಸ್ಸಿಗೆ ಇದ್ಯಾವುದೂ ನಾಟಲಿಲ್ಲ. ಗಟ್ಟಿ ಮನಸ್ಸು ಮಾಡಿ ಅವರು ಮಠದ ಆವರಣದಲ್ಲಿ ಹಾಕಲಾಗಿದ್ದ ನಿಯಾನ್ ಬಲ್ಬುಗಳು ಚೆಲ್ಲಿದ ಹಾಲಿನಂಥ ಬೆಳಕಲ್ಲಿ ದಡದಡನೆ ಹೆಜ್ಜೆ ಹಾಕುತ್ತ ಮಾಯಾಳ ಮನೆಯತ್ತ ನಡೆದರು. ಆಗ ಮಳಲಿ ಭೀಮಪ್ಪ ಆಶ್ಚರ್ಯಚಕಿತನಾಗಿ ಅವರು ಹಾಗೆ ಹೋಗುವುದನ್ನೇ ನೋಡುತ್ತ ನಿಂತ!

●